(*b*) The following measures are being or are proposed to be adopted for the development of irrigation in the Tungabhadra Project ayacut on the Mysore side :—

(1) Introducing a cropping pattern evolved for the area.

(2) Intensive propaganda to induce the ryots to adopt the cropping pattern.

(3) Opening of Sub-Depots for supply of seeds, implements, etc.

(4) Starting of Demonstration Farms to educate the ryots about the advantages of raising irrigated crops and adopting modern methods of agriculture.

(5) Supply of seeds and manure on loan.

(6) Publication of bulletins, leaflets and circulars on irrigation and agricultural practices in the area and supply of the same to the ryots.

(7) Appointment of a Senior Agricultural Officer to supervise and co-ordinate work on the development of irrigation.

(8) Grant of loans to ryots for purchase of bullocks, agricultural implements, manure, seeds, etc.

(9) Grant of Takkavi loans to the ryots in the area.

(10) Setting up of a Committee of Official and Non-official members to advice Government on matters relating to development of irrigation and allied matters.

ಶ್ರೀ ಇಜಾರಿ ಸಿರನಪ್ಪ.—ತುಂಗಭದ್ರಾ ಪ್ರಾಜೆಕ್ಟ್ ಕೆಳಗೆ ಎಷ್ಟು ಎಕರೆ ನೀರಾವರಿ ಆಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—93,000 ಎಕರೆ.

ಶ್ರೀ ಇಜಾರಿ ಸಿರನಪ್ಪ.—ಈಗ ನೀರು ಉಪಯೋಗ ಮಾಡಿಕೊಂಡಿರುವುದು ಎಷ್ಟು ಎಕರೆಗಳಿಗೆ ?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು ಒಂದು ಸಾವಿರ ಎಕರೆಗಳಿಗೆ.

ಶ್ರೀ ಇಜಾರಿ ಸಿರನಪ್ಪ —ಅಷ್ಟು ಕಡಮೆ ಎಕರೆ ಉಪಯೋಗ ಮಾಡಿಕೊಂಡು, ಅಷ್ಟು ಜಾಸ್ತಿ ಬೀಳು ಬಿಟ್ಟಿರುವುದಕ್ಕೆ ಏನುಕಾರಣ ?

ಶ್ರೀ ಕಡಿದಾಳ್ ಮಂಜಪ್ಪ.—ರೈತರು ಮೈಸೂರಿನ ಇತರ ಜಿಲ್ಲೆಗಳಲ್ಲಿ ಈ ವಿಚಾರದಲ್ಲಿ ಆನಕ್ಕಿ ವಹಿಸು ವಷ್ಟು ಅಲ್ಲಿ ವಹಿಸುತ್ತಿಲ್ಲವೆಂದು ನನಗೆ ತಿಳಿದುಬಂದಿದೆ. ಸರ್ಕಾರದವರು ಒದಗಿಸುವ ನೆರವನ್ನೇ ಅವರು ನಿರೀಕ್ಷಣೆ ಮಾಡುತ್ತಿದ್ದಾರೆ. ಅದಕ್ಕೋಸ್ಕರ ಕೆಲವು ಸಹಾಯಗಳನ್ನು ಒದಗಿಸಬೇಕೆಂದು ಸರ್ಕಾರದವರು ನಿರ್ಧಾರ ಮಾಡಿಕೊಂಡಿದ್ದಾರೆ. ಮತ್ತು ಈ ಸಹಾಯದ ವಿವರಣೆಗಳನ್ನು "B" ಪ್ರಶ್ನೆಗೆ ಉತ್ತರವಾಗಿ ಕೊಡಲಾಗಿದೆ.

ಶ್ರೀ ಇಜಾರಿ ಸಿರನಪ್ಪ.—ಸರ್ಕಾರದವರು ಒದಗಿಸುವ ನೆರವನ್ನು ನಿರೀಕ್ಷೆಮಾಡಿದಮೇಲೆ ಅವರಿಗೆ ಬೇಕಾದ ನೆರವನ್ನು ನೀಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಇಜಾರಿ ಸಿರನಪ್ಪ.—ಆದಷ್ಟು ಸಂಪೂರ್ಣವಾಗಿ ಆ ಪ್ರದೇಶವನ್ನು irrigate ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದೇ ಉದ್ದೇಶ; ಆದಷ್ಟು ಜಾಗ್ರತೆಯಾಗಿ 93,000 ಎಕರೆಗಳಿಗೂ ಕೂಡ ನೀರನ್ನು ಬಿಡಬೇಕೆಂಬುದೇ ಸರ್ಕಾರದ ಆಶಯ.

ಶ್ರೀ ಹುಚ್ಚಮಾಸ್ತಿಗೌಡ.—ಈಗಾಗಲೇ 30 ಸಾವಿರ ಎಕರೆ ಜಮೀನಿಗೆ ತೂಬುಗಳು, ಮಡಬಾಯಿಗಳು ಮಾಡಿವ್ವಾರೆ ಎಂಬುದು ಗೊತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿದ್ದಾರೆ.

Sri S. M. LINGAPPA.—Out of 93 thousand acres of land what is the extent of land that remains fallow.

Sri Kadidal MANJAPPA.—I think the major portion of the area is already under dry cultivation.

ಶ್ರೀ ಕೆ. ಲಕ್ಕಪ್ಪ.—ಒಂದು ಲಕ್ಷ ಎಕರೆ ಜಮೀನಿಗೂ ರೈತರು contribution ಕೊಟ್ಟಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಇನ್ನೂ ನಿರ್ಧಾರವಾಗಿಲ್ಲ. Contribution ಕೊಟ್ಟಿಲ್ಲ.

ಶ್ರೀ ಕೆ. ಲಕ್ಕಪ್ಪ.—ಮೈಸೂರಿನ ಹಾಗೆ ಅಲ್ಲಿ contribution ತೆಗೆದುಕೊಳ್ಳಬೇಕಾದುದು ನ್ಯಾಯವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ತೆಗೆದುಕೊಳ್ಳಬೇಕು.

Breached Tanks in Pavagada Taluk.

Q.—381. **Sri MALI MARIAPPA** (Pavagada).—

Will the Government be pleased to state :—

(*a*) the number and names of breached tanks which are not repaired up till now in Pavagada taluk ;

(*b*) the stage at which each of the abovementioned breached tanks record is at present ?

Sri Kadidal MANJAPPA (Minister for Revenue and Public Works).—

A.—(*a*) 1 Sulenaikanahalli Akkammodevarakere.
2 Mugadalbetta Thimmappaiyanakere.
3 Kanikalbande Bhamaiyanakere.
4 Inam Venkatapura Chikkere.
5 Mugadalbetta Hoskere.

(SRI KADIDAL MANJAPPA.)

(b) 1 Fresh enquiry has been conducted. The proposal is under consideration.
2 Dropped on account of prohibitive cost.
3 Deferred on account of high cost.
4 Fresh enquiry under the Irrigation Act is to be conducted.
5 Fresh enquiry under the Irrigation Act is to be conducted.

ಶ್ರೀ ಮಾಲಿ ಮರಿಯಪ್ಪ.—ಕೆರೆಗಳು ಒಡೆದು ಹೋಗಿ 15-20 ವರುಷಗಳು ಆಗಿದೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಜಾಸ್ತಿ ಆಗಿದ್ದರೂ ಆಗಿರಬಹುದು.

ಶ್ರೀ ಮಾಲಿ ಮರಿಯಪ್ಪ.—ಇಲ್ಲಿಯತನಕ ಆ ಕೆರೆಗಳನ್ನು, ದುರಸ್ತು ಕಾಮಗಾರಿಯಾಗಿ ಏತಕ್ಕೋಸ್ಕರ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲವೆಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ದುರಸ್ತು ಮಾಡುವಾಗ ಖರ್ಚು ಏಪರೀತವಾಗಿ ಆಗಿ ಅಲ್ಲಿ ಬರತಕ್ಕ ಲಾಭಕ್ಕಿಂತ ನಷ್ಟವೇ ಜಾಸ್ತಿಯಾಗಿದ್ದುದರಿಂದ, ಕೆಲವು ನಂದರ್ಭದಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ತಮಗೆ ಬೇಕಾದರೆ ಅಂಕಿ ಅಂಶಗಳನ್ನು ಕೊಡುವುದಕ್ಕೂ ಕೂಡ ತಯಾರಾಗಿದ್ದೇನೆ.

ಶ್ರೀ ಮಾಲಿ ಮರಿಯಪ್ಪ.—ಕೆರೆಗಳನ್ನು ದುರಸ್ತು ಮಾಡದೆ ಹೋದರೆ ಕೆರೆಯ ಹಿಂದುಗಡೆ ಇರತಕ್ಕಂಥ ತರೀ ಅಚ್ಚುಕಟ್ಟನ್ನು ಏನುಮಾಡಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ರೈತರು ಅಪೇಕ್ಷೆಪಟ್ಟರೆ dry ಆಗಿ convert ಮಾಡಬಹುದು.

ಶ್ರೀ ಮಾಲಿ ಮರಿಯಪ್ಪ.—ಅದನ್ನೇ ಬಹಳ ಹಿಂದೆ ಮಾಡಿಸಬಹುದಾಗಿತ್ತು ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಈಗ ಅಪೇಕ್ಷೆಪಟ್ಟರೆ ಈಗಲೂ ಮಾಡಬಹುದು. ಈಗ ಒಂದೆರಡು ಕೆರೆಯ ಅಚ್ಚುಕಟ್ಟು ಉದಾಹರಣೆಗೆ ಹೇಳಬಹುದು : ಮುಗದಾಳು ಬೆಟ್ಟದ ತಿಮ್ಮಪ್ಪಯ್ಯನ ಕೆರೆಯ ಅಚ್ಚುಕಟ್ಟು—ಆರು ಎಕರೆ ; ಕಾನೇಕಲ್ಲು ಬಂಡೆ ಭಾಮಯ್ಯನ ಕೆರೆ—63 ಎಕರೆ ಇದೆ.

ಶ್ರೀ ಮಾಲಿ ಮರಿಯಪ್ಪ.—ಭಾವಿಗಳ ಹಿಂದೆ ಕೆರೆಗಳಿರುವುದರಿಂದಲೂ ಪುಳೆ ಕಡಿಮೆಯಾಗಿರುವುದರಿಂದ ಈ ಕೆರೆಗಳನ್ನು ರಿಪೇರಿಮಾಡಿದರೆ ಅವುಗಳ ಹಿಂದಿನ ಭಾವಿಗಳಿಗೆ indirect benefit ಬರುತ್ತದೆ ಎಂಬುದು ಮುಖ್ಯ ತತ್ವವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದೂ ಒಂದು ಗಮನಕ್ಕೆ ತೆಗೆದುಕೊಳ್ಳಬೇಕಾದ ಅಂಶವೇನೋ ನಿಜ.

ಶ್ರೀ ಮಾಲಿ ಮರಿಯಪ್ಪ.—ಕೆಲವು ಕೆರೆಗಳ ವಿಚಾರದಲ್ಲಿ ಹಿಂದೆ enquiry ಆಗಿತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆ enquiry ಆಗಿದೆ. ರೈತರೂ ಕೂಡ ಮುಚ್ಚಳಿಕೆ ಪ್ರಕಾರ contribution ಮತ್ತು water rate ಸರ್ಕಾರಕ್ಕೆ ಕೊಡುತ್ತಿದ್ದುದು ನಾಲದು. ಅದಕ್ಕಾಗಿ ರೈತರು water rateಗಳನ್ನು ಕೊಡುವುದಕ್ಕೆ ತಯಾರಾಗಿದಾರೆಯೇ ಎಂದು ತಿಳಿದುಕೊಳ್ಳುವ ಬಗ್ಗೆ fresh enquiry ಆಗಬೇಕಾಗಿದೆ.

ಶ್ರೀ ಮಾಲಿ ಮರಿಯಪ್ಪ.—ದುರಸ್ತು ಆಗಬೇಕಾದ ಕೆರೆಗಳ ವಿಚಾರದಲ್ಲಿ ಇಷ್ಟೇ percentage ಬರಬೇಕು ಎನ್ನುವ ನಿಗದಿ ಇದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆರೆಗಳ ದುರಸ್ತು ಬಗ್ಗೆ ಭಾರತದ ಸರ್ಕಾರದಿಂದ ಮೈಸೂರು ಸರ್ಕಾರದವರು ಸಾಲ ಪಡೆಯುತ್ತಿದ್ದಾರೆ. ಈ ಸಾಲಕ್ಕೆ ಶೇಕಡ ನಾಲ್ಕರಷ್ಟು ನಾವು ಬಡ್ಡಿ ಕೊಡುತ್ತಿದ್ದೇವೆ. ಅದಕ್ಕೋಸ್ಕರ ಕನಿಷ್ಠ ಪಕ್ಷ ಶೇಕಡ ಮೂರರಷ್ಟಾದರೂ ಬಡ್ಡಿ ಕೊಡುವರೀತಿಯಲ್ಲಿ ನಾವು ಕೆಲಸವನ್ನು ಮಾಡಬೇಕೆಂದು ಹೇಳಿ ಒಂದು ನಿಯಮವನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಮಾಲಿ ಮರಿಯಪ್ಪ.—ಈಗ ಎಷ್ಟು ದಿವಸಗಳಿಂದ ಈ ನಿಯಮವನ್ನು ಇಟ್ಟುಕೊಳ್ಳಲಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ದಿವಸಗಳಿಂದಲೂ ಈಗಿನ ಒಂದೇ ನಿಯಮ ಜಾರಿಯಲ್ಲಿದೆ. ಆದರೆ ಹೊಸದಾಗಿ ನಿಯಮವೇನೂ ಮಾಡಿಲ್ಲ.

ಶ್ರೀ ಮಾಲಿ ಮರಿಯಪ್ಪ.—ತಾವು ಹಿಂದೆ ಹೇಳಿದಂತೆ ಬಾವಿಗಳಿಗೆ indirect benefit ವಾನ್ತವವಾಗಿ ಬರುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಕೆಲವು ಕೆರೆಗಳ ದುರಸ್ತಿನ ವಿಚಾರವನ್ನು ಪುನಃ ಪರಿಶೀಲನೆ ಮಾಡುವುದಕ್ಕಾಗುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಪುನಃ ಆ ವಿಷಯ Irrigation enquiry ಗೆ ಹೋಗಿದೆ. ಈಗ draw up ಮಾಡಿರತಕ್ಕಂಥ project ಗಳನ್ನು ಪುನಃ ಪರಿಶೀಲನೆ ಮಾಡುತ್ತೇವೆ. ಆದರೆ ಇದರಿಂದ ಪ್ರಯೋಜನ ಆಗುತ್ತದೆಯೇ ಎಂಬುದು ಯೋಚನೆ ಮಾಡಬೇಕಾದ ವಿಚಾರ.

ಶ್ರೀ ಮಾಲಿ ಮರಿಯಪ್ಪ.—ನಾನು ಅದನ್ನೇ ಕೇಳಬೇಕೆಂದಿದ್ದೇನೆ. Indirect ಆಗಿ benefits ಎಷ್ಟರ ಮಟ್ಟಿಗೆ ಆಗುತ್ತಿವೆಯೆಂಬುದು ಹಿಂದಿನ ರಿಪೋರ್ಟಿನಲ್ಲಿ ಇಲ್ಲದೆ ಇದ್ದರೆ ಅದನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—Indirect benefitsನ್ನು ಪಡೆಯುತಕ್ಕ ವರು ಏನಾದರೂ ಅಲ್ಪಸ್ವಲ್ಪ ಕಂಟ್ರಿಬ್ಯೂಷ್ಷ ಕೊಡುವುದಾದರೆ ಪುನಃ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕ್ಷಾಮ ಪ್ರದೇಶಕ್ಕೆ ಶೇಕಡ ಮೂರರಷ್ಟು return ಕಡಮೆಯಾದರೂ ಈ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ಕೇಂದ್ರ ಸರ್ಕಾರದವರೊಡನೆ ತಾವೇನಾದರೂ ವ್ಯವಹಾರ ನಡೆಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೇಂದ್ರ ಸರ್ಕಾರಕ್ಕೆ ಈ ವಿಚಾರ ತಿಳಿಸಿದ್ದೇವೆ. ಕ್ಷಾಮ ಪ್ರದೇಶದಲ್ಲೆ ಹೆಚ್ಚಿಗೆ ನೀರಾವರಿ ಕಾಮಗಾರಿಗಳನ್ನು ಕೈಕೊಳ್ಳಲು ಹಣ ಒದಗಿನಬೇಕೆಂದು ಕೇಳಿದ್ದೇವೆ. ಆದರೆ ಅವರಿಂದ ಹೆಚ್ಚಿಗೆ ಸಹಾಯ ಒದಗಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಾನು ಕೇಳುವುದು ರಿಟರ್ನ್ ವಿಷಯ.

ಶ್ರೀ ಕಡಿದಾಳ್ ಮಂಜಪ್ಪ.—ಹೌದು ; ಆದರೆ ಅವರು ಬಡ್ಡಿ ಬಿಡುವುದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕ್ಷಾಮಪ್ರದೇಶ ಎಂದು ಪ್ರತ್ಯೇಕವಾಗಿ ಅವರು ಹಣ ಸಹಾಯ ಮಾಡುವುದು ಏನೂ ಇಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ರಾಮಮೂರ್ತಿ ಕಮಿಟಿಯವರ ವರದಿಯ ಪ್ರಕಾರ ಭಾರತ ಸರ್ಕಾರದವರು ಲಕವಳ್ಳಿ ಜಲಾಶಯಕ್ಕೂ ಮತ್ತು ನುಗು ಜಲಾಶಯಕ್ಕೂ ಸಾಲದ ರೂಪದಲ್ಲಿ ಸಹಾಯ ಮಾಡುತ್ತಿದ್ದಾರೆ. ಗ್ರಾಂಟ್ ರೂಪದಲ್ಲಿ ಏನೂ ಕೊಟ್ಟಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ರಾಮಮೂರ್ತಿ ಕಮಿಟಿಯವರೇ ಈ ಪ್ರದೇಶವನ್ನು ನೋಡಿ ಎಲ್ಲ ವಿದ್ಯಮಾನಗಳನ್ನೂ ತಿಳಿದುಕೊಂಡಿರುವುದರಿಂದ, ಮತ್ತೆ ಕೇಂದ್ರ ಸರ್ಕಾರದವರಿಗೆ ಬಂದು ವಿನಾಯಿತಿ ಕೊಡುವುದಕ್ಕೆ ಕೇಳಿಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ —ವಿನಾಯಿತಿ ಕೊಡುವವರು ನಾವು. ಅವರಿಗೆ ಬಿಡ್ಡಿ ಕೊಟ್ಟರೆ ಆಯಿತು.

Officials Transferred to Income-Tax Department.

Q.—133. **Sri B. P. NAGARAJA MURTHY** (Malavalli).—

Will the Government be pleased to state :—

(*a*) the number of officials of Mysore Government who were taken to the Income-tax Department after it was taken by the Central Government;

(*b*) the number of them who have requested the Mysore Government to take them back to the Mysore Government Service;

(*c*) if so, on what grounds;

(*d*) the view of the Government in this respect?

A.—**Sri Kadidal MANJAPPA** (Minister for Revenue and Public Works).

(*a*) 108.

(*b*) 6.

(*c*) For personal reasons.

(*d*) The integration having taken place nearly 5 years ago, it would be embarrassing to reverse the decisions taken then and compliance with the request for such transfers in one case would set up an inconvenient precedent. For these reasons, Government are generally not inclined to consider taking back officials transferred to the Central Government

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಲ್ಲಿ 'Personal Reasons' ಎಂದು (c) ಪ್ರಶ್ನೆಗೆ ಉತ್ತರ ಹೇಳಿದ್ದೀರಿ. Personal reasons ಗಳಾವುವು ಎಂಬುದನ್ನು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಒಬ್ಬೊಬ್ಬರೂ ಒಂದೊಂದು ಕಾರಣ ಹೇಳಿದ್ದಾರೆ. ಸಿದ್ದಲಿಂಗಯ್ಯ ಎನ್ನುವವರು, ತಮ್ಮನ್ನು ಇನ್ಸ್‌ಪೆಕ್ಟರಾಗಿದ್ದುದನ್ನು ತಪ್ಪಿಸಿ ಕ್ಲಾರ್ಕ್ ಆಗಿ 'ರಿವರ್ಟ್' ಮಾಡಿದ್ದಾರೆಂದೂ, ತಮ್ಮ claimsನ್ನು ಅಲ್ಲಿನ Income-tax ಇಲಾಖೆಯವರು ಸರಿಯಾಗಿ consider ಮಾಡಿಲ್ಲವೆಂದೂ ಹೇಳಿ, ವಾಪಸು ತೆಗೆದುಕೊಳ್ಳಬೇಕೆಂದು ಕೇಳಿದಾರೆ. ನಾಗೇಶರಾವ್ ಎಂಬವರು, due to personal inconveniences and unavoidable circumstances he desires to come back from the Central Services. Then Sri Laxmi Rama Setty was reverted as a clerk and lost the chance of becoming the Assistant Sales-tax Officer as he was likely to be transferred outside Bangalore. Sri Puttanna was also likely to be transferred outside the State and in order to avoid the inconvenience he has put in the application. Another Sri Narasimiah has been retired. ಇನ್ನೊಬ್ಬರೂ ಇದೇ ರೀತಿ ಹೇಳಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರಿಗೆ ಈ ರೀತಿ Official circles ನಲ್ಲಿ ಅನ್ಯಾಯಗಳಾಗಿರುವುದನ್ನು ವಿಚಾರಣೆ ಮಾಡಬೇಕೆಂದು ಹೇಳಿ ತಾವೇನಾದರೂ ಇಂಡಿಯಾ ಸರ್ಕಾರದವರೊಡನೆ ಪತ್ರವ್ಯವಹಾರ ನಡೆಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಡೆಸಿದ್ದೇವೆ. ಅನ್ಯಾಯಗಳಾಗದಹಾಗೆ ನೋಡಿಕೊಳ್ಳಬೇಕೆಂದು ಮನವಿಮಾಡಿಕೊಂಡಿದ್ದೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರುಗಳು ಕೊಟ್ಟಿರ ತಕ್ಕ ಕಾರಣಗಳು ಸರಿಯಾಗಿದ್ದರೆ ಅವರನ್ನು ವಾಪಸು ತೆಗೆದುಕೊಳ್ಳುವುದರಲ್ಲಿರುವ ತೊಂದರೆಯೇನು?

Sri Kadidal MANJAPPA.—It is a question of policy. ಒಂದು ಸಾರಿ ಒಬ್ಬರಿಗೆ ಆ ರೀತಿ ಅವಕಾಶ ಕೊಟ್ಟರೆ, ಇನ್ನೊಂದು ಸಾರಿ ಇನ್ನೊಬ್ಬರು ಬಂದರೂ ಅವಕಾಶ ಕೊಡಬೇಕಾಗುತ್ತದೆ. ಅಲ್ಲದೆ, ಹೀಗೆ ಒಬ್ಬೊಬ್ಬರಾಗಿ ವಾಪಸು ಬಂದರೆ, ಅವರಿಗಿಲ್ಲಿ ಕೊಡುವುದಕ್ಕೆ ನ್ಥಳ ಇರಬೇಕಲ್ಲವೇ! ನೀವೇ ಆಗಾಗ್ಗೆ ಸಭೆಯಲ್ಲಿ ಹೇಳುತ್ತಿರುತ್ತೀರಿ, ಆದಳಿತ ವರ್ಗವನ್ನು ಕಡಮೆ ಮಾಡಬೇಕು ಎಂದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಂಟೆಗ್ರೇಷನ್ ಮಾಡಿದ ಸಂದರ್ಭದಲ್ಲಿ ಅವರ ಲೀನನ್ನು ನಮ್ಮ ಸರ್ಕಾರದಲ್ಲಿ ತೆಗೆದಿದ್ದಿರಾ?

ಶ್ರೀ ಕಡಿದಾಳ್ ಮಂಜಪ್ಪ.—ತೆಗೆದಿದೆ.

Sri M. PALANIYAPPAN.—Are these officers included in the Indian Revenue Service cadre, Sir?

Sri Kadidal MANJAPPA.—I want notice.

Sri M. PALANIYAPPAN.—Are not these officers being treated in a different manner from that of the Indian Officer of the Central Government?

Sri Kadidal MANJAPPA.—There were some complaints to that effect. There was some correspondence between this Government and the Central Government in this behalf. Subsequently they told us that no injustice had been done to those officers.

Sri M. PALANIYAPPAN.—May I know the terms of the agreement on which those officers are lent to the Central Government?

Sri Kadidal MANJAPPA.—They were not lent to the Central Govenment